ದಿಃ 27-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಿ ವಿಚಾರಣೆಗೆ ಒಳಪಡಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿಯರ ಪರ ಶ್ರೀ ಎ.ಎಮ್.ಪಿ. ವಕೀಲರಿಂದಃ**

ನನ್ನ ವಾದ ಪತ್ರದಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ . ನನ್ನ ಜನ್ಮ ದಿನಾಂಕ 01-04-1961 ಇರುತ್ತದೆ. ಪ್ರಸ್ತುತ ದಾವೆ ಹೂಡುವ ಮುನ್ನ ನಮ್ಮ ಅಜ್ಜ ಅಂದರೆ ನನ್ನ ತಂದೆಯ ತಂದೆಯ ಹೆಸರಿನಲ್ಲಿ ಯಾವ ಯಾವ ಆಸ್ತಿಗಳು ಇದ್ದವು ಎಂದು ಅವುಗಳ ನಂಬರ ಹೇಳಲು ಬರುವುದಿಲ್ಲ. ಪ್ರಸ್ತುತ ದಾವೆ ಹೂಡುವ ಮುನ್ನ ನಮ್ಮ ಅಜ್ಜನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇದ್ದಿರಲಿಲ್ಲ . ನಮ್ಮ ತಂದೆ ಮತ್ತು ಅವರ ಸಹೋದರ ಮತ್ತು ಅಜ್ಜಿಯ ಹೆಸರಿನಲ್ಲಿ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿರುತ್ತದೆ . ನಮ್ಮ ಅಜ್ಜನ ಸಹೋದರರು ಒಟ್ಟು ನಾಲ್ಕು ಜನ ಇದ್ದು ಅವರಲ್ಲಿ ನಮ್ಮ ಅಜ್ಜ ಕೊನೆಯವರಿದ್ದರು ಎಲ್ಲಾ ಆಸ್ತಿಗಳು ನಮ್ಮ ಹಿರಿಯ ಅಜ್ಜನ ಹೆಸರಿನಲ್ಲಿ ದಾಖಲಾಗಿದ್ದವು . ನಮ್ಮ ಅಜ್ಜ ಮೊದಲೇ ತೀರಿಕೊಂಡಿದ್ದರಿಂದ ಹಿರಿಯ ಅಜ್ಜನ ಹೆಸರಿನಲ್ಲಿ ಇದ್ದ ಆಸ್ತಿಗಳು1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿರುತ್ತವೆ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಮ್ಮದು ಏಕತ್ರ ಕುಟುಂಬ ಆಗಿದ್ದರಿಂದ 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮದು ಏಕತ್ರ ಕುಟುಂಬ ಇದ್ದ ಕಾರಣ 1 ನೇ ಪರತಿವಾದಿಯ ಹೆಸರಿನಲ್ಲಿ ಆಸ್ತಿಗಳು ದಾಖಲಾಗಿರುತ್ತವೆ ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ಡ ಉತಾರ ಆಗಲೀ ಅಥವಾ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಗೆ ಆರೋಗ್ಯ ಸಮಸ್ಯೆ ಯಾಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೇ.ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ. ಹಳಿಯಾಳ.